ಕೊಟ್ಟು ಕಾಲೇಜುಗಳನ್ನು ಮಾಡುತ್ತಿದ್ದೇವೆ. ಅಕಸ್ಮಾತ್ ಅದು ತುಂಬಿ ಹೊಸ ಕಾಲೇಜುಗಳ ಬೇಡಿಕೆ ಬಂದತಹ ಸಂದರ್ಭದಲ್ಲಿ ನಿಶ್ಚಿತವಾಗಿ ಲಿಂಗಸೂರು ಕಾಲೇಜಿನ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

12ನೇ ಹಣಕಾಸು ಯೋಜನೆಯಡಿಯಲ್ಲಿ ತುಮಕೂರು ಕ್ಷೇತ್ರಗಳಿಗೆ ನೀಡಿರುವ ಅನುದಾನದ ಬಗ್ಗೆ :

801 ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 12ನೇ ಹಣಕಾಸು ಯೋಜನೆಯಡಿಯಲ್ಲಿ ತುರುವೇಕೆರೆ, ತಿಪಟೂರು ಮತ್ತು ತುಮಕೂರು ಗ್ರಾಮಾಂತರ ವಿಧಾನ ಸಭಾ ಕ್ಷೇತ್ರಗಳಿಗೆ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು (ವಿಧಾನ ಸಭಾ ಕ್ಷೇತ್ರಗಳವಾರು ವಿವರಗಳನ್ನು ನೀಡುವುದು)

ಆ) ಈ ಮೂರು ಕ್ಷೇತ್ರಗಳಿಗೆ 12ನೇ ಹಣಕಾಸು ಯೋಜನೆಯಡಿಯಲ್ಲಿ ಇದುವರೆವಿಗೂ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು (ವಿವರಗಳನ್ನು ನೀಡುವುದು);

ಇ) ಈ ಅನುದಾನವು ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಬೇಕಾದ ಅನುದಾನವೇ ಅಥವಾ ಹಿಂದಿನ ವರ್ಷದಲ್ಲಿ ಮಂಜೂರು ಮಾಡಬೇಕಾದ ಬಾಕಿ ಉಳಿದಿರುವ ಅನುದಾನವೇ (ಪೂರ್ಣ ವಿವರ ನೀಡುವುದು);

ಈ) ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 12ನೇ ಹಣಕಾಸು ಯೋಜನೆಯಡಿ ರಸ್ತೆ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಿದ ಅನುದಾನದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಉ) ಈ ಇಲಾಖೆಯು ಮಂಜೂರು ಮಾಡಿರುವ 12ನೇ ಹಣಕಾಸು ಯೋಜನೆಯಡಿಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 12ನೇ ಹಣಕಾಸು ಯೋಜನೆಯಡಿಯಲ್ಲಿ ರಸ್ತೆ ಮತ್ತು ಕಟ್ಟಡಗಳ ನಿರ್ವಹಣೆಗಾಗಿ ಪ್ರಸ್ತುತ 2009–10ನೇ ಸಾಲಿನಲ್ಲಿ ತುರುವೇಕೆರೆ, ತಿಪಟೂರು ಮತ್ತು ತುಮಕೂರು (ಗ್ರಾ) ಮತಕ್ಷೇತ್ರಗಳನ್ನು ಒಳಗೊಂಡ ತಾಲ್ಲೂಕುಗಳಿಗೆ ಕೆಳಕಂಡಂತೆ ಅನುದಾನ ಹಂಚಿಕೆ ಮಾಡಲಾಗಿದೆ.

ಕ್ರ ಸಂ.	ತಾಲ್ಲೂಕು	ಹಂಚಿಕೆಯಾದ ಅನುದಾನ (ರೂ.ಲಕ್ಷಗಳಲ್ಲಿ)	
		ರಸ್ತೆ ನಿರ್ವಹಣೆ	ಜಿಪಂ/ತಾಪಂ ಕಟ್ಟಡ ನಿರ್ವಹಣೆ
1	ತುರುವೇಕೆರೆ	72.18	17.59
2	ತಿಪಟೂರು	93.13	17.59
3	ತುಮಕೂರು	95.21	23.83

ಆ) ಈ ತಾಲ್ಲೂಕುಗಳಿಗೆ 12ನೇ ಹಣಕಾಸು ಯೋಜನೆಯಡಿ 2006–07 ರಿಂದ 2009–10 (ನವೆಂಬರ್–09ರ ಅಂತ್ಯಕ್ಕೆ) ರವರೆಗೆ ಬಿಡುಗಡೆಯಾದ ಅನುದಾನ ಕೆಳಕಂಡಂತಿದೆ.

ಕ್ರ ಸಂ.	ತಾಲ್ಲೂಕು	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	
		ರಸ್ತೆ ನಿರ್ವಹಣೆ	ಜಿಪಂ/ತಾಪಂ ಕಟ್ಟಡ ನಿರ್ವಹಣೆ
1	ತುರುವೇಕೆರೆ	203.72	25.13
2	ತಿಪಟೂರು	271.99	25.12
3	ತುಮಕೂರು	336.20	25.12

ಇ) ಪ್ರಸ್ತುತ ಸಾಲಿನಲ್ಲಿ 12ನೇ ಹಣಕಾಸು ಆಯೋಗ ಯೋಜನೆಯಡಿ ಸದರಿ ತಾಲ್ಲೂಕುಗಳಿಗೆ ಬಿಡುಗಡೆಯಾದ ಅನುದಾನವು

1. 2008–09ನೇ ಸಾಲಿನ ರಸ್ತೆ ಕಾರ್ಯಕ್ರಮದಡಿ ಹಂಚಿಕೆಯಾದ ತುರುವೇಕೆರೆ ತಾಲ್ಲೂಕಿನ ರೂ.62.32 ಲಕ್ಷ ತಿಪಟೂರು ತಾಲ್ಲೂಕಿನ ರೂ.80.41 ಲಕ್ಷ ಮತ್ತು ತುಮಕೂರು ತಾಲ್ಲೂಕಿನ ರೂ.82.20 ಲಕ್ಷಗಳ ಪೂರ್ಣ ಅನುದಾನವು ಪ್ರಸ್ತುತ ಸಾಲಿನಲ್ಲಿ ಬಿಡುಗಡೆಯಾಗಿದೆ.

2. 2007–08ನೇ ಸಾಲಿನ ಕಟ್ಟಡಗಳ ಹಂಚಿಕೆಯ 2ನೇ ಕಂತಿನ ಅನುದಾನ ತುರುವೇಕೆರೆ ತಾಲ್ಲೂಕಿಗೆ ರೂ.3.79 ಲಕ್ಷ, ತಿಪಟೂರು ತಾಲ್ಲೂಕಿಗೆ ರೂ. 3.79 ಲಕ್ಷ ಹಾಗೂ ತುಮಕೂರು ತಾಲ್ಲೂಕಿಗೆ ರೂ.3.79 ಲಕ್ಷ ಹಾಗೂ 2008–09ನೇ ಸಾಲಿನ ಮೊದಲ ಕಂತಿನ ಕಟ್ಟಡಗಳ ನಿರ್ವಹಣಾ ಅನುದಾನ ತುರುವೇಕೆರೆಗೆ ರೂ.3.61 ಲಕ್ಷ, ತಿಪಟೂರಿಗೆ ರೂ.3.61 ಲಕ್ಷ ಮತ್ತು ತುಮಕೂರು ತಾಲ್ಲೂಕಿಗೆ ರೂ.3.61 ಲಕ್ಷಗಳು ಪ್ರಸ್ತುತ ಸಾಲಿನಲ್ಲಿ ಬಿಡುಗಡೆಯಾಗಿದೆ.

ಕಟ್ಟಡಗಳ ನಿರ್ವಹಣೆಯ 2008–09ನೇ ಸಾಲಿನ 2ನೇ ಕಂತು ಹಾಗೂ 2009–10ನೇ ಸಾಲಿನ ಪೂರ್ಣ ಅನುದಾನ ಬಿಡುಗಡೆಗೆ ಬಾಕಿ ಇರುತ್ತದೆ.

ಈ) 2009–10ನೇ ಸಾಲಿನ 12ನೇ ಹಣಕಾಸು ಆಯೋಗದ ಯೋಜನೆಯಡಿ ರಸ್ತೆಗಳ ನಿರ್ವಹಣೆಗೆ ರೂ.173.73 ಕೋಟಿಗಳನ್ನು ಆದೇಶ ದಿನಾಂಕ: 24–6–09ರಲ್ಲಿ ಹಂಚಿಕೆ ಮಾಡಲಾಯಿತು. ಪ್ರಸ್ತುತ ಸಾಲಿನ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಅನುದಾನ ಲಭ್ಯವಾಗುವುದರಲ್ಲಿ ಅನಿಶ್ಚಿತತೆ ಉದ್ಭವಿಸಿದ್ದರಿಂದ ಇದೇ ಸಾಲಿನ ಈ ಕಾರ್ಯಕ್ರಮ ಅನುಷ್ಠಾನವನ್ನು ಜಿಲ್ಲಾ ಪಂಚಾಯಿತಿಗಳು ತಡೆ ಹಿಡಿಯುವಂತೆ ದಿನಾಂಕ: 4–8–2009ರಲ್ಲಿ ಸೂಚನೆ ನೀಡಲಾಗಿದೆ. ತಾಲ್ಲೂಕುವಾರು ಹಂಚಿಕೆಯ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಉ) ಬಂದಿರುವುದಿಲ್ಲ.

ಊ) ಅನ್ವಯಿಸುವುದಿಲ್ಲ.

ಅನುಬಂಧ

12ನೇ ಹಣಕಾಸು ಆಯೋಗ 2009–10ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ತಾಲ್ಲೂಕುವಾರು ಹಂಚಿಕೆ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ	ತಾಲ್ಲೂಕು	ತಾಲ್ಲೂಕುವಾರು ಹಂಚಿಕೆ ಮಾಡಿದ ಒಟ್ಟು ಅನುದಾನ
1	ಬಾಗಲಕೋಟೆ	ಬಾದಾಮಿ	78.50
2		ಬಾಗಲಕೋಟೆ	56.48
3		ಬೀಳಗಿ	71.54

4		ಹುನಗುಂದ	121.58
5		ಜಮಖಂಡಿ	137.48
6		ಮುಧೋಳ	95.57
ಒಟ್ಟು			**561.15**
7	ಬೆಂಗಳೂರು (ಗ್ರಾ)	ದೇವನಹಳ್ಳಿ	48.67
8		ದೊಡ್ಡಬಳ್ಳಾಪುರ	84.01
9		ಹೊಸಕೋಟೆ	85.76
10		ನೆಲಮಂಗಲ	57.73
ಒಟ್ಟು			**276.17**
11	ಬೆಂಗಳೂರು (ನಗರ)	ಆನೇಕಲ್	74.42
12		ಬೆಂಗಳೂರು ಪೂರ್ವ	29.90
13		ಬೆಂಗಳೂರು ಉತ್ತರ	84.69
14		ಬೆಂಗಳೂರು ದಕ್ಷಿಣ	74.50
ಒಟ್ಟು			**263.51**
15	ಬೆಳಗಾಂ	ಬೈಲಹೊಂಗಲ	102.04
16		ಬೆಳಗಾಂ	60.15
17		ಖಾನಾಪುರ	92.02
18		ರಾಮದುರ್ಗ	73.45
19		ಸವದತ್ತಿ	84.62
20		ಅಥಣಿ	189.61
21		ಚಿಕ್ಕೋಡಿ	93.43
22		ಗೋಕಾಕ್	71.20
23		ಹುಕ್ಕೇರಿ	103.76
24		ರಾಯಬಾಗ್	75.31
ಒಟ್ಟು			**945.59**
25	ಬಳ್ಳಾರಿ	ಬಳ್ಳಾರಿ	106.97
26		ಹೊಸಪೇಟೆ	39.94
27		ಸಂಡೂರು	33.64
28		ಸಿರಗುಪ್ಪ	71.43

29		ಹಡಗಲಿ	71.55
30		ಹಗರಿಬೊಮ್ಮನಹಳ್ಳಿ	69.31
31		ಕೂಡ್ಲಿಗಿ	95.43
	ಒಟ್ಟು		**488.27**
32		ಔರಾದ್	70.42
33		ಭಾಲ್ಕಿ	53.08
34	ಬೀದರ್	ಬೀದರ್	52.35
35		ಬಸವಕಲ್ಯಾಣ	60.99
36		ಹುಮ್ನಾಬಾದ್	38.90
	ಒಟ್ಟು		**275.74**
37		ಬಾಗೇವಾಡಿ	117.90
38		ಬಿಜಾಪುರ	168.73
39	ಬಿಜಾಪುರ	ಇಂಡಿ	175.07
40		ಮುದ್ದೇಬಿಹಾಳ್	169.45
41		ಸಿಂದಗಿ	138.05
	ಒಟ್ಟು		**769.20**
42		ಚಾಮರಾಜನಗರ	94.59
43		ಗುಂಡ್ಲುಪೇಟೆ	82.60
44	ಚಾಮರಾಜನಗರ	ಕೊಳ್ಳೇಗಾಲ	106.75
45		ಯಳಂದೂರು	28.72
	ಒಟ್ಟು		**312.66**
46		ಚಿಕ್ಕಬಳ್ಳಾಪುರ	43.82
47		ಚಿಂತಾಮಣಿ	86.78
48		ಗೌರಿಬಿದನೂರು	75.12
49	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	66.72
50		ಶಿಡ್ಲಘಟ್ಟ	64.28
51		ಗುಡಿಬಂಡೆ	33.18
		ಒಟ್ಟು	**369.90**
52	ಚಿಕ್ಕಮಗಳೂರು	ಚಿಕ್ಕಮಗಳೂರು	177.01

53		ಕಡೂರು	93.85
54		ಕೊಪ್ಪ	86.78
55		ಮೂಡಿಗೆರೆ	241.45
56		ನರಸಿಂಹರಾಜಪುರ	60.44
57		ಶೃಂಗೇರಿ	47.13
58		ತರೀಕೆರೆ	63.79
ಒಟ್ಟು			**770.45**
59	ಚಿತ್ರದುರ್ಗ	ಚಳ್ಳಕೆರೆ	233.23
60		ಚಿತ್ರದುರ್ಗ	119.17
61		ಹಿರಿಯೂರು	154.10
62		ಹೊಳಲ್ಕೆರೆ	81.81
63		ಹೊಸದುರ್ಗ	101.35
64		ಮೊಳಕಾಲ್ಮೂರು	61.43
ಒಟ್ಟು			**751.09**
65	ದಕ್ಷಿಣ ಕನ್ನಡ	ಬಂಟ್ವಾಳ	186.70
66		ಬೆಳ್ತಂಗಡಿ	290.27
67		ಮಂಗಳೂರು	129.27
68		ಪುತ್ತೂರು	188.04
69		ಸುಳ್ಯ	123.50
ಒಟ್ಟು			**917.78**
70	ದಾವಣಗೆರೆ	ಚನ್ನಗಿರಿ	67.17
71		ದಾವಣಗೆರೆ	58.95
72		ಹರಿಹರ	63.38
73		ಹೊನ್ನಾಳಿ	64.22
74		ಹರಪನಹಳ್ಳಿ	37.08
75		ಜಗಳೂರು	84.14
ಒಟ್ಟು			**374.94**
76	ಧಾರವಾಡ	ಧಾರವಾಡ	106.86
77		ಹುಬ್ಬಳ್ಳಿ	61.59

78		ಕಲಘಟಗಿ	93.11
79		ಕುಂದಗೋಳ್	67.71
80		ನವಲಗುಂದ	78.14
ಒಟ್ಟು			**407.41**
81	ಗದಗ	ಗದಗ	100.07
82		ಮುಂಡರಗಿ	49.76
83		ನರಗುಂದ	42.86
84		ರೋಣ	102.44
85		ಶಿರಹಟ್ಟಿ	72.91
ಒಟ್ಟು			**368.04**
86	ಗುಲ್ಬರ್ಗಾ	ಅಫ್ಜಲ್‌ಪುರ	95.73
87		ಅಳಂದ	133.81
88		ಚಿಂಚೋಳಿ	126.05
89		ಚಿತ್ತಾಪುರ	113.53
90		ಗುಲ್ಬರ್ಗಾ	105.46
91		ಜೇವರ್ಗಿ	116.09
92		ಸೇಡಂ	43.72
93		ಶಹಾಪುರ	113.46
94		ಶೋರಾಪುರ	87.40
95		ಯಾದಗೀರ್	116.09
ಒಟ್ಟು			**1051.34**
96	ಹಾಸನ	ಅರಸೀಕೆರೆ	101.72
97		ಹೊಳೆನರಸೀಪುರ	58.63
98		ಚನ್ನರಾಯಪಟ್ಟಣ	90.14
99		ಆಲೂರು	62.48
100		ಅರಕಲಗೂಡು	29.18
101		ಬೇಲೂರು	90.38
102		ಹಾಸನ	90.91
103		ಸಕಲೇಶಪುರ	73.22

ಒಟ್ಟು			**596.66**
104	ಹಾವೇರಿ	ಬ್ಯಾಡಗಿ	48.88
105		ಹಾನಗಲ್	100.27
106		ಹಾವೇರಿ	87.73
107		ಹಿರೇಕೆರೂರು	87.34
108		ರಾಣಿಬೆನ್ನೂರು	163.58
109		ಸವಣೂರು	56.69
110		ಶಿಗ್ಗಾವಿ	72.09
ಒಟ್ಟು			**616.58**
111	ಕೊಡಗು	ಮಡಿಕೇರಿ	210.92
112		ಸೋಮವಾರಪೇಟೆ	202.63
113		ವಿರಾಜಪೇಟೆ	141.24
ಒಟ್ಟು			**554.79**
114	ಕೋಲಾರ	ಕೋಲಾರ	69.60
115		ಬಂಗಾರಪೇಟೆ	77.35
116		ಮಾಲೂರು	63.57
117		ಮುಳಬಾಗಿಲು	74.73
118		ಶ್ರೀನಿವಾಸಪುರ	74.76
ಒಟ್ಟು			**360.01**
119	ಕೊಪ್ಪಳ	ಗಂಗಾವತಿ	68.94
120		ಕೊಪ್ಪಳ	70.55
121		ಕುಷ್ಟಗಿ	70.09
122		ಯಲಬುರ್ಗ	82.52
ಒಟ್ಟು			**292.10**
123	ಮಂಡ್ಯ	ಕೃಷ್ಣರಾಜಪೇಟೆ	128.15
124		ಮದ್ದೂರು	102.83
125		ಮಳವಳ್ಳಿ	178.49
126		ಮಂಡ್ಯ	132.79
127		ನಾಗಮಂಗಲ	181.13

128		ಪಾಂಡವಪುರ	83.56
129		ಶ್ರೀರಂಗಪಟ್ಟಣ	57.69
ಒಟ್ಟು			**864.64**
130	ಮೈಸೂರು	ಹೆಗ್ಗಡದೇವನಕೋಟೆ	100.17
131		ಹುಣಸೂರು	93.56
132		ಕೃಷ್ಣರಾಜನಗರ	66.72
133		ಪಿರಿಯಾಪಟ್ಟಣ	65.60
134		ಮೈಸೂರು	63.98
135		ನಂಜನಗೂಡು	85.52
136		ಟಿ.ನರಸೀಪುರ	68.45
ಒಟ್ಟು			**544.00**
137	ರಾಮನಗರ	ಚನ್ನಪಟ್ಟಣ	73.59
138		ಕನಕಪುರ	87.82
139		ಮಾಗಡಿ	65.93
140		ರಾಮನಗರ	58.38
ಒಟ್ಟು			**285.72**
141	ರಾಯಚೂರು	ದೇವದುರ್ಗ	81.80
142		ಲಿಂಗಸುಗೂರು	86.42
143		ಮಾನ್ವಿ	86.30
144		ರಾಯಚೂರು	97.53
145		ಸಿಂಧನೂರು	94.63
ಒಟ್ಟು			**446.68**
146	ಶಿವಮೊಗ್ಗ	ಹೊಸನಗರ	137.05
147		ಸಾಗರ	186.53
148		ಶಿಕಾರಿಪುರ	84.52
149		ಸೊರಬ	75.66
150		ಭದ್ರಾವತಿ	87.58
151		ಶಿವಮೊಗ್ಗ	109.19
152		ತೀರ್ಥಹಳ್ಳಿ	159.11

ಒಟ್ಟು			**839.64**
153	ತುಮಕೂರು	ಚಿಕ್ಕನಾಯಕನಹಳ್ಳಿ	78.65
154		ಕೊರಟಗೆರೆ	68.65
155		ಮಧುಗಿರಿ	126.81
156		ಪಾವಗಡ	80.84
157		ಶಿರಾ	139.39
158		ಗುಬ್ಬಿ	127.46
159		ಕುಣಿಗಲ್	127.10
160		ತಿಪಟೂರು	93.13
161		ತುಮಕೂರು	95.21
162		ತುರುವೇಕೆರೆ	72.18
ಒಟ್ಟು			**1009.42**
163	ಉಡುಪಿ	ಕಾರ್ಕಳ	199.54
164		ಕುಂದಾಪುರ	455.03
165		ಉಡುಪಿ	379.39
ಒಟ್ಟು			**1033.96**
166	ಉತ್ತರ ಕನ್ನಡ	ಅಂಕೋಲ	90.05
167		ಭಟ್ಕಳ	80.78
168		ಹೊನ್ನಾವರ	109.60
169		ಜೊಯ್ಡಾ (ಸುಪಾ)	91.60
170		ಕಾರವಾರ	66.39
171		ಕುಮಟಾ	65.22
172		ಹಳಿಯಾಳ	49.75
173		ಮುಂಡಗೋಡು	33.74
174		ಸಿದ್ದಾಪುರ	149.83
175		ಸಿರ್ಸಿ	178.22
176		ಯಲ್ಲಾಪುರ	110.38
ಒಟ್ಟು			**1025.56**
ಒಟ್ಟು			**17373.00**

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಏನಾಗಿದೆಯೆಂದರೆ, ಎಲ್ಲಾ ಹಂತಗಳಲ್ಲಿಯೂ ಸಹಾ 12ನೇ ಹಣಕಾಸಿನ ಯೋಜನೆಯಡಿಯಲ್ಲಿ ಹಣ ಸಮಗ್ರವಾಗಿ ಬಿಡುಗಡೆಯಾಗುತ್ತಿಲ್ಲ. ಒಂದೊಂದು ಕ್ಷೇತ್ರಕ್ಕೆ 4 ಕೋಟಿ, 3 ಕೋಟಿ ಹಣ ಕೊಡುತ್ತಾರೆ, ಒಂದೊಂದು ಕ್ಷೇತ್ರಕ್ಕೆ 60 ಲಕ್ಷ, 70 ಲಕ್ಷ ಹಣವನ್ನು ಕೊಡುತ್ತಾರೆ. ಇದು ಬಹಳ ಅನ್ಯಾಯವಾಗುತ್ತದೆ. ಕೆಲವು ಪ್ರದೇಶಗಳನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡುವಾಗಲೂ ಸಹಾ ನಮ್ಮ ತಾಲ್ಲೂಕಿಗೆ ಅನ್ಯಾಯವಾಗಿದೆ. ಹಾಗಾಗಿ ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದು ಇಷ್ಟೆ, ಈ ತಾರತಮ್ಯವನ್ನು ದಯಮಾಡಿ ಸರಿ ಮಾಡಿ ಎಲ್ಲಾ ಕ್ಷೇತ್ರಗಳಿಗೂ ಸರಿಸಮಾನವಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

(11-00 AM)

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 12ನೇ ಹಣಕಾಸಿನ ಯೋಜನೆ ಅಡಿಯಲ್ಲಿ ತುರುವೇಕೆರೆ, ತಿಪಟೂರು ಮತ್ತು ತುಮಕೂರು ಈ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಿಗದಿಪಡಿಸಿರುವ ಅನುದಾನ ಮತ್ತು ಬಿಡುಗಡೆಯಾಗಿರುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ನಮ್ಮಲ್ಲಿ ವಿಧಾನಸಭಾ ಕ್ಷೇತ್ರವಾರು ಅದರ ಬಗ್ಗೆ ದಾಖಲೆ ಇರುವುದಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ : ಕೆಲವು ಕಡೆ 455 ಲಕ್ಷ ಕೊಟ್ಟಿದ್ದೀರಿ. ಕೆಲವು ಕಡೆ 379 ಲಕ್ಷ, ಕೆಲವು ಕಡೆ 79 ಲಕ್ಷ ನಮಗೆ 74 ಲಕ್ಷ ಕೊಟ್ಟಿದ್ದೀರಿ. ಈ ತಾರತಮ್ಯವನ್ನು ದಯಮಾಡಿ ಸರಿಪಡಿಸಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರೇನು ತಾರತಮ್ಯವಾಗಿರುವ ಬಗ್ಗೆ ಹೇಳಿದ್ದಾರೆ. ಆ ರೀತಿ ಯಾವುದೇ ತಾರತಮ್ಯವಾಗಿರುವುದಿಲ್ಲ. ಒಂದು ವೇಳೆ ತಾರತಮ್ಯವಾಗಿರುವುದು ಕಂಡುಬಂದರೆ ಆ ರೀತಿ ಆಗದ ರೀತಿಯಲ್ಲಿ ಎಲ್ಲಾ ಕ್ಷೇತ್ರಗಳಿಗೆ ಆಯಾಯ ಕ್ಷೇತ್ರದ ವ್ಯಾಪ್ತಿ ಜನಸಂಖ್ಯೆಯನ್ನೆಲ್ಲಾ ನೋಡಿಕೊಂಡು ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಪ್ರಕಾಶ್ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, 12ನೇ ಹಣಕಾಸು ಯೋಜನೆಯ ಬಗ್ಗೆ ನನ್ನ ಕ್ಷೇತ್ರದಲ್ಲಿ.

ಅಧ್ಯಕ್ಷರು : ಇಲ್ಲಾ. ತಾವು ಕುಳಿತುಕೊಳ್ಳಿ. ಕೆ.ಜಿ. ಕುಮಾರಸ್ವಾಮಿ ಯವರನ್ನು ಪ್ರಶ್ನೆ ಕೇಳಲು ಕರೆದಿದ್ದೇನೆ. ಕೆ.ಜಿ. ಕುಮಾರಸ್ವಾಮಿಯವರು ಇಲ್ಲವೇ?

ಶ್ರೀ ಪ್ರಕಾಶ್ ಹುಕ್ಕೇರಿ : ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಇಲ್ಲಾ.

ಶ್ರೀ ಪ್ರಕಾಶ್ ಹುಕ್ಕೇರಿ : ಏಕೆ ಕೊಡುವುದಿಲ್ಲ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ಈ ಪ್ರಶ್ನೆ ಇರುವುದು ಬಹಳ ಸ್ಪಷ್ಟವಾಗಿ ಅವರ ಕ್ಷೇತ್ರದ ಬಗ್ಗೆ. ನೀವು ಬೇರೆಯದರ ಬಗ್ಗೆ ಕೇಳಿದರೆ ಅವರ ಹತ್ತಿರ ಮಾಹಿತಿ ಹೇಗೆ ಬರುತ್ತದೆ?

ಶ್ರೀ ಪ್ರಕಾಶ್ ಹುಕ್ಕೇರಿ : ತಾವು ದಯಮಾಡಿ ಅವಕಾಶ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು : ತಾವು ಬೇರೆ ರೂಪದಲ್ಲಿ ತನ್ನಿ. ಅವಕಾಶ ಕೊಡುತ್ತೇನೆ. ನೀವು ನಿಮ್ಮ ಕ್ಷೇತ್ರದ 12ನೇ ಹಣಕಾಸಿನ ಯೋಜನೆಯ ಬಗ್ಗೆ ಕೇಳುತ್ತಿದ್ದೀರಿ. ಪ್ರಶ್ನೋತ್ತರದಲ್ಲಿ ನಿಮ್ಮ ಜಿಲ್ಲೆಯ ಬಗ್ಗೆ ಅವರ ಹತ್ತಿರ ಮಾಹಿತಿ ಇರುವುದಿಲ್ಲ.

ಶಿವಮೊಗ್ಗ ಕ್ಷೇತ್ರದಲ್ಲಿರುವ ವಿದ್ಯುತ್ ಘಟಕಗಳ ಬಗ್ಗೆ :

719 ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಇರುವ ಖಾಸಗಿ ವಿದ್ಯುತ್ ಘಟಕಗಳೆಷ್ಟು? ಅವು ಯಾವುವು (ವಿವರಗಳನ್ನು ನೀಡುವುದು)

ಆ) ಈ ಖಾಸಗಿ ವಿದ್ಯುತ್ ಘಟಕಗಳು ಎಷ್ಟು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿವೆ; (2007 ರಿಂದ ವಿವರ ನೀಡುವುದು)

ಇ) ಈ ಖಾಸಗಿ ವಿದ್ಯುತ್ ಉತ್ಪಾದನೆ ಘಟಕಗಳಿಗೆ ನೀಡುತ್ತಿರುವ ಮೂಲಭೂತ ಸೌಲಭ್ಯಗಳೇನು: ಈ ಪೈಕಿ ಎಷ್ಟು ಘಟಕಗಳು ನಷ್ಟದಲ್ಲಿವೆ; ಇದಕ್ಕೆ ತಾಂತ್ರಿಕ/ಆಡಳಿತಾತ್ಮಕ ಕಾರಣಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಕೆಳಗಿನಂತೆ ವಿದ್ಯುತ್ ಉತ್ಪಾದಿಸುವ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರದ ಅನುಮತಿ ನೀಡಲಾಗಿದೆ: